# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಕೊಡಗು–ಮಡಿಕೇರಿ

## **SC No**. 41/2024

| | | | |
|---|---|---|---|
| ಸಾಕ್ಷಿದಾರರ ಹೆಸರು | : | **ಡಾ. ಪ್ರಿಯದರ್ಶಿನಿ ಎಂ.** | **PW –18** |
| ಗಂಡನ ಹೆಸರು | : | **ಚೆಂಗಪ್ಪ** | **CW – 22** |
| ವಯಸ್ಸು | : | **41 ವರ್ಷ** | |
| ವೃತ್ತಿ | : | **Associate Professor, KOIMS, ಮಡಿಕೇರಿ** | |
| ವಾಸ | : | **ಮಡಿಕೇರಿ** | |

**ಸಾಕ್ಷಿಯನ್ನು ದಿನಾಂಕ 06–03–2026 ರಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**<u>ಮುಖ್ಯ ವಿಚಾರಣೆ: ಸರ್ಕಾರಿ ಅಭಿಯೋಜಕರಿಂದಃ</u>**

1. ನಾನು 2014 ರಿಂದ ಈವರೆಗೂ ಕೊಡಗು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಮಡಿಕೇರಿಯಲ್ಲಿ Associate Professor ಎಂದು ಕೆಲಸ ಮಾಡುತ್ತಿದ್ದೇನೆ.

2. ದಿನಾಂಕ 28.11.2023 ರಂದು ಮಡಿಕೇರಿ ಗ್ರಾಮಾಂತರ ಪೊಲೀಸ್ ಠಾಣೆಯ ಪೊಲೀಸರು ಆರೋಪಿತನ ರಕ್ತದ ಗುಂಪನ್ನು ಪರೀಕ್ಷಿಸಿ ವರದಿ ಕೊಡಲು ಕೋರಿದ್ದು, ಆ ಪ್ರಕಾರ ನಾನು ಅದೇ ದಿನ ಆರೋಪಿತನ ರಕ್ತ ಪರೀಕ್ಷೆ ಮಾಡಿ ರಕ್ತದ ಗುಂಪಿನ ಬಗ್ಗೆ ದೃಡೀಕರಣ ಕೊಟ್ಟಿರುತ್ತೇನೆ. ವರದಿ ಪ್ರಕಾರ ಆರೋಪಿತನ ರಕ್ತದ ಗುಂಪು A+ve (A Positive) ಇರುತ್ತದೆ. ಸದರಿ ದೃಡೀಕರಣವನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು **ನಿಪಿ–28** ಎಂದು ಗುರುತಿಸಲಾಯಿತು. ಅದರ ಮೇಲಿರುವ

ಸಾಕ್ಷಿ ಸಹಿಯನ್ನು **ನಿಪಿ–28(ಎ)** ಎಂದು ಗುರುತಿಸಲಾಯಿತು.

**ಪಾಟೀ ಸವಾಲು– ಆರೋಪಿ ಪರ ವಕೀಲರಾದ ಶ್ರೀ. ಓ.ಎಸ್.ಸಿ. ರವರಿಂದಃ**

1. ರಕ್ತದ ಪರೀಕ್ಷೆಯನ್ನು ನಮ್ಮ ಸಿಬ್ಬಂದಿಯವರು ಮಾಡಿರುತ್ತಾರೆ, ನಾನು ಪರಿಶೀಲನೆ ಮಾಡಿರುತ್ತೇನೆ. ನಾನು ಆರೋಪಿತನ ರಕ್ತದ ಗುಂಪಿನ ಬಗ್ಗೆ ಪರಿಶೀಲನೆ ಮಾಡಿಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ** ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಇದೆ.

ಸಹಿ/–
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಕೊಡಗು–ಮಡಿಕೇರಿ.